ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಬಳ್ಳಾರಿ ವೈದ್ಯಕೀಯ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ :

೧)	ಪ್ರಾಧ್ಯಾಪಕರು ...	೧೯
೨)	ಸಹಾಯಕ ಪ್ರಾಧ್ಯಾಪಕರ ...	೨೩
೩)	ಉಪನ್ಯಾಸಕರು ...	೫೫

ಆ) ಬಂದಿದೆ.

ಇ) ಎರಡನೆಯ ಘಟಕವನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಹೌದು.

ಎಣಿಕೆದಾರರ ಹುದ್ದೆಗಳಿಗೆ ಅನುಮತಿ ನೀಡುವಲ್ಲಿ ವಿಳಂಬವಾಗಿರುವುದು

೨೦೪೮. ಶ್ರೀ ಎ. ಕೃಷ್ಣಪ್ಪ (ಪರ್ತೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು ಎಣಿಕೆದಾರರ (ಎನ್ಯೂಮರೇಟರ್ಸ್) ಹುದ್ದೆಯನ್ನು ಭರ್ತಿ ಮಾಡುವ ಸಂಬಂಧದಲ್ಲಿ ಐಎಫ್ಎಸ್ ೧೬೩ ಡಿಎಸ್ಇ ೮೬ನೇ ಸಂಖ್ಯೆಯ ಕಡತವನ್ನು ಒಪ್ಪಿಗೆಗಾಗಿ ಆರ್ಥಿಕ ಇಲಾಖೆಯವರಿಗೆ ಯಾವಾಗ ಸ್ವೀಕರಿಸಿದ್ದಾರೆ?

ಆ) ಆರ್ಥಿಕ ಇಲಾಖೆಯವರು ಸದರಿ ಕಡತಕ್ಕೆ ಒಪ್ಪಿಗೆ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಇ) ಹಾಗಿದ್ದಲ್ಲಿ, ಅನುಮತಿಯನ್ನು ಯಾವಾಗ ನೀಡಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ದಿನಾಂಕ ೨೧-೪-೧೯೮೮ರಂದು ಸ್ವೀಕರಿಸಲಾಯಿತು.

ಆ) ಮತ್ತು ಇ) ಆರ್ಥಿಕ ಇಲಾಖೆಯ ಅಭಿಪ್ರಾಯದೊಂದಿಗೆ ಕಡತವನ್ನು ಇಲಾಖೆಗೆ ದಿನಾಂಕ ೫-೫-೧೯೮೮ರಂದು ಹಿಂದಿರುಗಿಸಲಾಗಿದೆ.

ಮಂಡಕೇರಿ ಜನರಲ್ ಆಸ್ಪತ್ರೆಯ ಬಗ್ಗೆ

೨೩೦೭. ಡಿ. ಎ. ಚಿನ್ನಪ್ಪ (ಮಂಡಿಕೇರಿ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಿಕೇರಿಯಲ್ಲಿರುವ ಜನರಲ್ ಆಸ್ಪತ್ರೆಯಲ್ಲಿ ಸುಮಾರು ನಾಲ್ಕು ತಿಂಗಳಿಂದ ಎರಡು ಎಕ್ಸ್-ರೇ ಯುನಿಟ್‌ಗಳು ಕೆಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಇದೇ ಆಸ್ಪತ್ರೆಗೆ ಸೇರಿರುವ ದಾದಿಯರಿಗೆ ಕಲ್ಪಿಸಿರುವ ವಸತಿ ಗೃಹ ಬಿದ್ದು ಹೋಗಿರುವುದರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರದವರು ಈ ಮೇಲ್ಕಾಣಿಸಿದ ತೊಂದರೆಗಳನ್ನು ಸರಿಪಡಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳುವರೇ?

ಶ್ರೀ ಎನ್. ರಾಚಯ್ಯ (ಆರೋಗ್ಯ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲಾಗಿದೆ.—

ಮಡಿಕೇರಿಯಲ್ಲಿರುವ ಜನರಲ್ ಆಸ್ಪತ್ರೆಯಲ್ಲಿ ೩ ಕ್ಷ-ಕಿರಣಗಳಿದ್ದು ಅವುಗಳಲ್ಲಿ ೨ ಕೆಟ್ಟು ಹೋಗಿದ್ದು ದಿನಾಂಕ ೧೬-೪-೧೯೮೮ರಂದು ಒಂದು ಕ್ಷ-ಕಿರಣಯಂತ್ರವನ್ನು ದುರಸ್ತಿಗೊಳಿಸಿ ಉಪಯೋಗಿಸಲಾಗುತ್ತಿದೆ.

ಮತ್ತೊಂದು ೧೦೦ ಎಂಎ ಕ್ಷ-ಕ್ಷಿರಣ ಯಂತ್ರವನ್ನು ಮೂಲ ಸರಬರಾಜುದಾರರಾದ ಮೆ/ ಐ.ಜಿ.ಇ ಇಂಡಿಯಾ ಲಿಮಿಟೆಡ್ ಅವರಿಗೆ ದಿನಾಂಕ ೪-೩-೧೯೮೮ರಂದು ಪತ್ರ ಬರೆದು ದುರಸ್ತಿ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಕೋರಲಾಗಿದೆ. ಹಾಗೂ ದಿನಾಂಕ ೬-೪-೧೯೮೮ರಂದು ಮತ್ತೊಂದು ನೆನಪೊಲೆಯನ್ನು ಕಳುಹಿಸಲಾಗಿದೆ.

ದಾದಿಯರ ವಸತಿ ಗೃಹ ಕಟ್ಟಡವು ಹಳೆಯದಾಗಿದ್ದು ರಿಪೇರಿ ಮಾಡಲು ಯೋಗ್ಯವಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಆದ್ದರಿಂದ ಹೊಸ ಕಟ್ಟಡವನ್ನು ಕಟ್ಟುವುದಕ್ಕೆ ಹಣದ ಲಭ್ಯತೆಯನ್ನು ನೋಡಿ ಪರಿಶೀಲಿಸಲಾಗುವುದು. ದಾದಿಯರಿಗೆ ಬೇರೆ ಕಡೆ ವಸತಿಯನ್ನು ಒದಗಿಸಲಾಗಿದೆ.

ಗಡಿ ಹಾಗೂ ಕನ್ನಡ ಕಾವಲು ಸಮಿತಿಯಿಂದಾಗಿರುವ ಪ್ರಯೋಜನಗಳು

೨೦೫೩. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಡಿ ಮತ್ತು ಕನ್ನಡ ಕಾವಲು ಸಮಿತಿಯು ರಚನೆಯಿಂದ ರಾಜ್ಯಕ್ಕಾಗಿರುವ ಪ್ರಯೋಜನಗಳೇನು? ಸದರಿ ಸಮಿತಿಯ ಅಧ್ಯಕ್ಷರ ಅಧಿಕಾರಗಳೇನು;

ಆ) ಸಮಿತಿಯು ರಚನೆಯಾದಂದಿನಿಂದ ಇಲ್ಲಿಯವರೆಗೆ ವೆಚ್ಚವಾಗಿರುವ ಹಣವೆಷ್ಟು; ವಿವರಗಳನ್ನು ನೀಡುವುದು;

ಇ) ಸದರೀ ಸಮಿತಿಯ ಅವಧಿಯು ಎಂದು ಮುಗಿಯುತ್ತದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧) ಸಮಿತಿಯು ರಚನೆಯಿಂದ ಸರ್ಕಾರದ ಭಾಷಾ ನೀತಿ ಉತ್ತಮವಾಗಿ ಕಾರ್ಯರೂಪಕ್ಕೆ ಬಂದಿದೆ.

೨) ಸಮಿತಿಯು ಕಾರ್ಯವ್ಯಾಪ್ತಿಯನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.

ಆ) ರೂ. ೩,೭೬,೫೪೪-೨೦ಗಳು. ವಿವರಗಳು ಅನುಬಂಧ-೨ರಲ್ಲಿದೆ.

ಇ) ಅವಧಿಯನ್ನು ನಿಗದಿಪಡಿಸಿಲ್ಲ.

ಸಮಿತಿಯ ಕಾರ್ಯವ್ಯಾಪ್ತಿ

ಅ) ಸರ್ಕಾರದ ಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟು ನಿಟ್ಟಾಗಿ ಪ್ರಯತ್ನಿಸಿರುವುದೇ?

ಆ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಿರುವುವೇ? ಹಾಗಿದ್ದರೆ ಅವುಗಳು ಯಾವುವು?

ಇ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು?

ಈ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು?

ಉ) ಸರ್ಕಾರದ ಭಾಷಾ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ತೃಪ್ತಿಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ?

ಊ) ಮಹಾಜನ ಆಯೋಗದ ಬೌಂಡರಿಯ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.